ದಿಃ 22.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ದಿಃ 31.01.2024 ರಂದು 1 ನೇ ಪ್ರತಿವಾದಿಯು ನನ್ನ ನೋಟೀಸಿಗೆ ನೀಡಿರುವ ಉತ್ತರವನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ತೆರಿಗೆ ರಸೀದಿಯ ಯತಾ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ಡಿಮಾಂಡ್ ರಿಜಿಸ್ಟರ್ ನ ಯತಾ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ಎಂ.ಆರ್.ಟಿ.33/2012-13 ಅನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 11.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆ ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ., ವಕೀಲರಿಂದ ವಾದಿ ಪರವಾಗಿ

3. ಪಲ್ಗುಣಿ ಗ್ರಾಮದ ಸರ್ವೆ ನಂಬರ್ 133 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು. MR no. 37/2006-07 ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು.

(ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ದಿಃ 13.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಂ.ಎಂ.ಆರ್. ವಕೀಲರಿಂದ 5 ನೇ ಪ್ರತಿವಾದಿ ಪರವಾಗಿ

4. 1 ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ನಮ್ಮ ತಂದೆಗೆ ವಸಂತ್ ಕುಮಾರ್ ಎಂದು ಮತ್ತು ಇನ್ನೊಂದು ಹೆಸರು ಅಪ್ಪಣ್ಣ ಚಾರ್ ಎಂದು ಕರೆಯುತ್ತಾರೆ. 1 ನೇ ಪ್ರತಿವಾದಿಗೆ ಒಬ್ಬರೇ ಹೆಂಡತಿ. 1 ನೇ ಪ್ರತಿವಾದಿಗೆ ನಾವು 4 ಜನ ಮಕ್ಕಳು. 3 ನೇ ಪ್ರತಿವಾದಿ ದೊಡ್ಡ ಮಗಳು ಆಗಿರುತ್ತಾಳೆ. ನನ್ನ, 3 ಮತ್ತು 4 ನೇ ಪ್ರತಿವಾದಿಯರ ಮದುವೆ ಆಗಿರುತ್ತದೆ. 3 ಮತ್ತು 4 ನೇ ಪ್ರತಿವಾದಿಯರು ಯಾವ ವರ್ಷ ಮದುವೆ ಆಗಿದ್ದಾರೆ ಎಂದು ನನಗೆ ನೆನಪಿಲ್ಲ. ನನ್ನ ಮದುವೆಯಾಗಿ 2 ವರ್ಷ ಕಳೆದಿದೆ. 3 ಮತ್ತು 4 ನೇ ಪ್ರತಿವಾದಿಯರ ಮದುವೆ ನಿಶ್ಚಯಿಸಿ ಆದ ಮದುವೆ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಯರ ಮದುವೆಯಾದಾಗ ನಾನು ಕುಂದೂರು ಬೈರಿಗದ್ದೆ ಗ್ರಾಮದಲ್ಲಿ ವಾಸವಿದ್ದೆ. ಬೈರಿಗದ್ದೆ ಗ್ರಾಮದಲ್ಲಿ ನಾವು ಚಿಕ್ಕವರಾಗಿದ್ದಾಗಿನಿಂದಲ ವಾಸವಿದ್ದೆವು, ಎಲ್ಲಿಯವರೆಗೂ ವಾಸವಾಗಿದ್ದೆವು ಎಂದು ನೆನಪಿಲ್ಲ. ನನ್ನ ಮದುವೆಯ ಕಾಲದಲ್ಲಿ ನಾನು ಪಲ್ಗುಣಿ ಗ್ರಾಮದಲ್ಲಿ ವಾಸವಿದ್ದೆ. ಪಲ್ಗುಣಿ ಗ್ರಾಮಕ್ಕೆ 2005-2006 ರಲ್ಲಿ ಬಂದಿದ್ದೆವು.

5. 3 ಮತ್ತು 4 ನೇ ಪ್ರತಿವಾದಿಯರ ಮದುವೆಯಾದಾಗ 5 ನೇ ಪ್ರತಿವಾದಿ ಜನಿಸಿದ್ದ, ಆ ಸಮಯದಲ್ಲಿ 5 ನೇ ಪ್ರತಿವಾದಿ 7 ರಿಂದ 8 ನೇ ತರಗತಿ ಕಲಿಯುತ್ತಿದ್ದ. 3 ಮತ್ತು 4 ನೇ ಪ್ರತಿವಾದಿಯರ ಮದುವೆ ಖರ್ಚು ವೆಚ್ಚಗಳನ್ನು 1 ನೇ ಪ್ರತಿವಾದಿ ಭರಿಸಿದ್ದರು. ನನ್ನ ಮದುವೆಯ ಖರ್ಚು ವೆಚ್ಚಗಳನ್ನು 5 ನೇ ಪ್ರತಿವಾದಿ ಭರಿಸಿದ್ದ ಎಂದರೆ ಸರಿಯಲ್ಲ. ನನ್ನ ಮದುವೆಯ ಖರ್ಚು ವೆಚ್ಚಗಳನ್ನು 1, 3 ಮತ್ತು 4 ನೇ ಪ್ರತಿವಾದಿಯರು ನಿರ್ವಹಿಸಿದ್ದರು. ನನ್ನ ಮದುವೆಯ ಖರ್ಚು ವೆಚ್ಚಗಳನ್ನು 5 ನೇ ಪ್ರತಿವಾದಿ ಭರಿಸಿದ್ದರು ಸಹ ಭರಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವ ಆಸ್ತಿ ಪಲ್ಗುಣಿ ಗ್ರಾಮದಲ್ಲಿ ಇದ್ದು, ಸರ್ವೆ ನಂಬರ್ 133 ವಿಸ್ತೀರ್ಣ 2 ಎಕರೆ 4 ಗುಂಟೆ ಇರುತ್ತದೆ. ಸರ್ವೆ ನಂಬರ್ 133 ರಲ್ಲಿ ಕರಾಬು ಜಮೀನು

ಇಲ್ಲ. ದಾವ ಐಟಂ ನಂಬರ್ 2 ಎರಡನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ದಾವ ಐಟಂ ನಂಬರ್ 2 ರ ಮೇಲೆ ಮೂಡಿಗೆರೆಯ ಎಸ್.ಬಿ.ಐ ಬ್ಯಾಂಕಿನಲ್ಲಿ ಸಾಲ ಇರುತ್ತದೆ. ಮನೆ ನಿರ್ಮಿಸುವಾಗ ಎಷ್ಟು ಸಾಲ ಪಡೆಯಲಾಗಿತ್ತು, ಈಗ ಎಷ್ಟು ಸಾಲ ಬಾಕಿ ಇದೆ ಎಂದು ನನಗೆ ಗೊತ್ತಿಲ್ಲ. ಬ್ಯಾಂಕಿನಲ್ಲಿ ಇರುವ ಸಾಲವನ್ನು 5 ನೇ ಪ್ರತಿವಾದಿ ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಬ್ಯಾಂಕಿನ ಸಾಲವನ್ನು ಯಾರು ತೀರಿಸಿದ್ದರು ಎಂಬ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಯಾರು ತೀರಿಸಿಲ್ಲ ಎಂದು ನುಡಿಯುತ್ತಾರೆ. 8 ರಿಂದ 9 ವರ್ಷಗಳ ಹಿಂದೆ ಮನೆಯ ಮೇಲೆ ಸಾಲವನ್ನು ಮಾಡಿದ್ದರು. ದಾವ ಐಟಂ ನಂಬರ್ 2 ರ ಮನೆಯಲ್ಲಿ 2-3 ವರ್ಷಗಳಿಂದ 5 ನೇ ಪ್ರತಿವಾದಿ ವಾಸವಿದ್ದಾರೆ, ಮೊದಲು 1 ಮತ್ತು 2 ನೇ ಪ್ರತಿವಾದಿಯರು ವಾಸವಿದ್ದರು.

7. 7 ರಿಂದ 8 ವರ್ಷಗಳಿಂದ ಬ್ಯಾಂಕಿನ ಸಾಲ ಕಟ್ಟದೇ ಹೋದರೆ ಬ್ಯಾಂಕಿನವರು ಆಸ್ತಿಯನ್ನು ಮುಟುಗೋಲು ಹಾಕಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಮುಟ್ಟುಗೋಲು ಹಾಕಲು ಬಂದಾಗ ನಾನು ರೂ.2,60,000-00 ಸಾಲವನ್ನು ಪಾವತಿಸಿದ್ದೆ ಎಂದು ನುಡಿಯುತ್ತಾರೆ. ನಾನು ಸಾಲವನ್ನು ತೀರಿಸಿದಾಗ ಬೆಂಗಳೂರಿನ ಹೊಟೇಲ್ ನಲ್ಲಿ 6 ವರ್ಷಗಳ ಹಿಂದೆ 2020 ರಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ರೂ.2,60,000-00 ಸಾಲವನ್ನು ಬ್ಯಾಂಕಿಗೆ ನಗದಾಗಿ ಪಾವತಿಸಿದ್ದೆ. ರೂ.2,60,000-00 ಸಾಲವನ್ನು ತೀರಿಸಿದ ದಾಖಲೆಗಳು ನನ್ನ ಬಳಿ ಈಗ ಇಲ್ಲ. ನಾನು ಸದರಿ ಹಣವನ್ನು ಪಾವತಿಸಿದ ಬಗ್ಗೆ ಬ್ಯಾಂಕಿನಿಂದ ದಾಖಲೆಯನ್ನು ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ. ನಾನು ಯಾವುದೇ ಸಾಲವನ್ನು ತೀರಿಸದೇ ಇದ್ದರು ಸಹ ಸಾಲ ತೀರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು 5 ನೇ ಪ್ರತಿವಾದಿಯೇ ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ.

8. ದಾವ ಐಟಂ ನಂಬರ್ 2 ರ ಮನೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸದರಿ ಮನೆಯ ವಿಸ್ತೀರ್ಣ ನನಗೆ ನೆನಪಿಲ್ಲ. ಸದರಿ ಮನೆ ಸರ್ವೆ ನಂಬರ್ 133 ರಲ್ಲಿ ಇರುತ್ತದೆ. ದಾವ ಐಟಂ ನಂಬರ್ 2 ಮನೆಯನ್ನು 5 ನೇ

ಪ್ರತಿವಾದಿ ತಮ್ಮ ಸ್ವಂತ ಹಣದಲ್ಲಿ ನಿರ್ಮಿಸಿದ್ದಾರೆ ಎಂದರೆ ಸುಳ್ಳು. ನಾನು 5 ನೇ ಪ್ರತಿವಾದಿಯ ವಿರುದ್ಧ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮೂಡಿಗೆರೆಯಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣ ಈಗಲು ವಿಚಾರಣೆಯಲ್ಲಿ ಇದೆ ಎಂದರೆ ಸರಿ. ನನ್ನ ಮತ್ತು ನನ್ನ ಗಂಡ ಮದುವೆ ನಿಶ್ಚಯಿಸಿದ ಆದ ಮದುವೆಯಾಗಿರುತ್ತದೆ. ನನ್ನ ಗಂಡ ನನ್ನ ಮಾವನ ಮಗನಾಗಿರುತ್ತಾರೆ. ನಾನು ಪ್ರೇಮ ವಿವಾಹ ಮಾಡಿಕೊಂಡಿದ್ದರು ಸಹ ನಿಶ್ಚಯಿಸಿ ಆದ ಮದುವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆ ಆಗುವ ಕಾಲದಲ್ಲಿ 5 ನೇ ಪ್ರತಿವಾದಿ ವಿರೋದ ವ್ಯಕ್ತ ಪಡಿಸಿದ್ದ ಎಂದರೆ ಸುಳ್ಳು. ಆತ ಮದುವೆಗೆ ವಿರೋದ ವ್ಯಕ್ತಿ ಪಡಿಸಿದ ಕಾರಣ ಆತನ ವಿರುದ್ಧ ದ್ವೇಷವನ್ನು ಹೊಂದಿದ್ದೇನೆ ಎಂದರೆ ಸುಳ್ಳು. ನಂತರ ರಾಜಿ ಮಾಡಿಕೊಂಡ ಕಾರಣ ನನ್ನ ಮದುವೆ ಖರ್ಚು ವೆಚ್ಚಗಳನ್ನು 5 ನೇ ಪ್ರತಿವಾದಿಯೇ ಭರಿಸಿದ್ದ ಎಂದರೆ ಸುಳ್ಳು.

9. ಈ ದಾವೆಯನ್ನು ನನ್ನ ಮದುವೆಗೂ ಮೊದಲೇ ದಾಖಲಿಸಿದ್ದೆ. ನನ್ನ ಮದುವೆ ದಿಃ 01.05.2024 ರಂದು ಆಗಿತ್ತು. ನನ್ನ ಮದುವೆಯಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ